ಶ್ರೀ ಎಂ. ವಿ. ವೆಂಕಟಪ್ಪ.—90 ರೂಪಾಯಿಗಿಂತ ಕಡಿಮೆ ಇರುವ ವೇತನ ಶ್ರೇಣಿಯವರಿಗೆ ತುಟ್ಟಿಭತ್ಯ ಹೆಚ್ಚಳ 12 ರೂಪಾಯಿ ಮತ್ತು 90–109 ವರೆಗಿನ ಸಂಬಳದವರಿಗೆ 10 ರೂಪಾಯಿ ನಗದು ರೂಪದ ಹೆಚ್ಚಳ ಮಾಡಿರುವುದರಿಂದ ತಾರತಮ್ಯ ಮಾಡುವುದಕ್ಕೆ ಕಾರಣವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಇದನ್ನು ಕೊಚ್ಚಿರತಕ್ಕಂಥಾದ್ದು ಪೇ ಕಮಿಷನ್ ಶಿಫಾರಸುಗಳ ಆಧಾರದ ಮೇರೆ.

ಶ್ರೀ ಎಂ. ವಿ. ವೆಂಕಟಪ್ಪ.—1-11-1967 ರಿಂದ ಹೆಚ್ಚಿನ ತುಟ್ಟಿಭತ್ಯ ಕೊಡಬೇಕು ಎಂದು ಪೇ ಕಮಿಷನ್ ಶಿಫಾರಸು ಮಾಡಿದ್ದಾರೆ ಅಲ್ಲವೇ ? 1-3-1968 ರಿಂದ ಕೊಡಬೇಕು ಎಂದು ಮಾಡಿರುವುದಕ್ಕೆ ಕಾರಣ ಏನು ?

ಶ್ರೀ ರಾಮಕೃಷ್ಣ ಹೆಗಡೆ.—ಆ ರೀತಿ ಕೊಡುವುದಕ್ಕೆ ಸರಕಾರಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ.—ಕೇಂದ್ರ ಸರಕಾರದವರು ಹೆಚ್ಚಿನ ತುಟ್ಟಿ ಭತ್ಯ ಕೊಡುವ ಲಿಮಿಟ್ಟನ್ನು 500 ರೂಪಾಯಿ ಸಂಬಳದ ವರೆಗೆ ಇಟ್ಟಿದ್ದಾರೆ. ಇಲ್ಲಿ 450 ರೂಪಾಯಿ ವರೆಗೆ ಲಿಮಿಟ್ಟು ಇದೆ. 500 ರೂಪಾಯಿ ಸಂಬಳದವರೆಗೆ ತುಟ್ಟಿ ಭತ್ಯ ಕೊಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಪೇ ಕಮೀಷನ್ ಶಿಫಾರಸುಗಳನ್ನು ನಾವು ಅವಲಂಬಿಸಿರುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ.—City Compensatory allowance ಕೊಡುವುದನ್ನು ಇದರಲ್ಲಿ ನಮೂದು ಮಾಡಿಲ್ಲ. ಮದ್ರಾಸ್ ಸಿಟಿಯಲ್ಲಿ ಕನ್‌ಸಿಡರ್ ಮಾಡಿದ ಹಾಗೆ ಬೆಂಗಳೂರು ಕೂಡ ದೊಡ್ಡ ಪಟ್ಟಣ ಎಂದು ಅನೌನ್ಸ್ ಮಾಡಿ ಬೆಂಗಳೂರಿನಲ್ಲಿ ಇದು ಬಿ-2 ಪಟ್ಟಣ ಎಂದು ಇಲ್ಲಿಯೂ ಸಿಟಿ ಕಾಂಪೆನ್‌ಸೇಟರಿ ಅಲೋಯನ್ಸ್ ಕೊಡುವುದಕ್ಕಾಗುವುದಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಪೇ ಕಮಿಷನ್ ಶಿಫಾರಸುಗಳನ್ನು ಅವಲಂಬಿಸಿರುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ.—ಈ ಹೆಚ್ಚು ಮಾಡಿದ ತುಟ್ಟಿ ಭತ್ಯ ಮಾರ್ಚ್ ತಿಂಗಳ ಸಂಬಳದಲ್ಲಿ ಸೇರಿಸುವುದಕ್ಕೆ ಇನ್ನೂ ವರೆಗೆ ಸರ್ಕಾರಿ ಆಜ್ಞೆ ಹೊರಟಿಲ್ಲ. ಅದಕ್ಕೆ ಕೊಡರೇ ಏರ್ಪಾಡು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮಾರ್ಚ್ ಒಂದನೇ ತಾರೀಖಿನಿಂದ ಇದು ಅನ್ವಯಿಸುತ್ತದೆ ಎಂದು. ಆ ರೀತಿ ತುಟ್ಟಿ ಭತ್ಯ ಸಿಕ್ಕುತ್ತದೆ.

Supply of Power to Irrigation Pumpsets

94. **Sri C. BANDI GOWDA** (Teachers' Constituency).—

Will the Minister for Public Works be pleased to state :—

(*a*) the Number of Irrigation Pumpsets for which power has been supplied so far during the current financial year;

(*b*) what was the target ?

A.—**Sri VEERENDRA PATIL** (Minister for Public Works).—

(*a*) 9,897 (to end of December 1967).

(*b*) 12,(00.

ಶ್ರೀ ಸಿ. ಬಂದೀಗೌಡ.—ಮಂಡ್ಯ ಜಿಲ್ಲೆಯಲ್ಲಿ ಎಷ್ಟು ನೀರಾವರಿ ಪಂಪ್ ಸೆಟ್ಟುಗಳಿಗೆ ಪವರ್ ಕೊಟ್ಟಿದ್ದೀರಿ ?

† ಶ್ರೀ ವೀರೇಂದ್ರ ಪಾಟೀರ್.—ಮಂಡ್ಯ ಜಿಲ್ಲೆಗೆ 811.

ಶ್ರೀ ಸಿ. ಬಂದೀಗೌಡ.—ಎಷ್ಟು ಪಂಪ್ ಸೆಟ್ಟುಗಳಿಗೆ ಪವರ್ ಕೊಡಬೇಕು ಎಂದು ಏರ್ಪಾಡು ಇದೆ ?

ಶ್ರೀ ವೀರೇಂದ್ರ ಪಾಟೀರ್.—ಬಹುಶಃ ಅಷ್ಟೇ ಇರುತ್ತದೆ. ಇಲ್ಲಿರುವ ಅಂಕಿ ಸಂಖ್ಯೆಗಳ ಪ್ರಕಾರ ದಿನೆಂಬರ್ 1967 ರ ಕೊನೆಯವರೆಗೆ 9,897 ಮತ್ತು ಮಾರ್ಚ್ ತಿಂಗಳ ಒಳಗಾಗಿ 12,000ಕ್ಕೆ ಹೋಗಬಹುದು.

Government Spun Silk Mills, Channapatna

95. Sri V. VENKATAPPA (Legislative Assembly Constituency).—

Will the Minister for Labour, Animal Husbandry, Fisheries and Sericulture be pleased to state :—

(*a*) whether the Government Spun Silk Mills, Channapatna is supplying yarn to the public for weaving on contract basis ;

(*b*) whether tenders were called for this purpose if so, when ;

(*c*) the number of tenders received in this behalf ;

(*d*) the lowest and highest rate quoted by the tenderers ?

A.—Sri D. DEVARAJ URS (Minister for Labour, Animal Husbandry, Fisheries and Sericulture).—

(*a*) Yes.

(*b*) No.

(*c*) Does not arise in view of the reply to clause (*b*).

(*d*) This does not arise in view of reply to clause (*b*) of the question.

ಶ್ರೀ ವಿ. ವೆಂಕಟಪ್ಪ.—ಟೆಂಡರ್ಸ್ ಏತಕ್ಕೋಸ್ಕರ ಕರೆಯಲಿಲ್ಲ ?

ಶ್ರೀ ಡಿ. ದೇವರಾಜ ಅರಸ್.—ಟೆಂಡರ್ಸ್ ಕರೆಯತಕ್ಕ ಅಗತ್ಯವಿಲ್ಲ. ಇರುವ ಮೂರು ಯುನಿಟ್ಸ್‌ನಲ್ಲಿ ಯಾರಿಗೆ ಬೇಕಾದರೂ ಕಂಡಿಷನ್ಸ್ ಹಾಕಿ ಇದನ್ನು ಕೊಡುವುದಕ್ಕೆ ಅಭ್ಯಂತರ ವೇನಿಲ್ಲ. ಆದುದರಿಂದ ಟೆಂಡರ್ಸ್ ಕರೆಯುವ ಅಗತ್ಯವಿಲ್ಲ.

Mr. CHAIRMAN.—The held over Questions will be taken up on Monday.

QUESTIONS FOR ANSWERS ON THE DAY

(but not taken up)

D. A. to Government Servants

37. Sri S. MUKUNDA RAO (Teachers' Constituency).—

Will the Minister for Finance, Planning and Commerce and Industries be pleased to state :—

(*a*) whether the States of Madras, Kerala and Andhra have raised the D. A. of their servants to the level of the Central Government servants ;

(*b*) when our State will sanction the rise ?